ಚಿತ್ತ ಕೆತ್ತಿದ ಚಿತ್ರ

# ಮೌಢ್ಯಗಳನ್ನು ಒಡೆಯುವ ಅನುಪಮಾ

## ಸುಧಾಮೂರ್ತಿಯವರ 'ಮಹಾಶ್ವೇತೆ' ಕಾದಂಬರಿಯ ನಾಯಕಿಯ ದಿಟ್ಟತನದ ನೆನಪುಗಳು



**ನಾಗಶ್ರೀ ಅಜಯ್**

ಕಲೆ: ವಿ.ಎಂ. ಮಂಜುನಾಥ್

ಕಥೆ, ಕಾದಂಬರಿಯ ಪಾತ್ರಗಳು ಕಲ್ಪನೆಯ ಮೂಸೆಯಿಂದ ಹೊರಬಂದವಾದರೂ ನನ್ನ ಪಾಲಿಗೆ ಈ ಲೋಕದ ಯಾವುದೋ ಮೂಲೆಯಲ್ಲಿ ಜೀವಂತವಿರುವ ವ್ಯಕ್ತಿಗಳೆಂದೇ ಅನಿಸುತ್ತದೆ. ಕಾಲ, ದೇಶ, ಭಾಷಾತೀತವಾಗಿ ಭಾವಲೋಕದೊಳಗೊಂದು ಜಾಗ ಸೃಷ್ಟಿಸಿಕೊಂಡು ಆಗೀಗ ಸಂದರ್ಭಾನುಸಾರ ಎದ್ದು ಬಂದು ಸಂವಾದ ನಡೆಸುತ್ತವೆ. ಕೆಲವೊಮ್ಮೆ ನಿದ್ದೆ, ಕನಸು, ಎಚ್ಚರದಲ್ಲೂ ಕಾಡಿ ಕಂಗೆಡಿಸುತ್ತವೆ. ದುರಂತ ಅಂತ್ಯದ ವಸ್ತುವೆಂದರೆ, ಅದೇ ಕಾರಣಕ್ಕೆ ಹಿಂಜರಿಯುವ ನನ್ನ ನಿಲುವು ಅತಿ ಭಾವುಕತೆ ಎನಿಸಬಹುದಾದರೂ ಇಂತಹ ಅಸಂಖ್ಯಾತ ಪಾತ್ರಗಳಿಂದ ಭಾವಲೋಕ ಶ್ರೀಮಂತವಾಗಿರುವುದು ಸತ್ಯ. ಹಾಗೆ ಎಂಟು-ಹತ್ತು ವರ್ಷಗಳ ಕಾಲ ಕನಸಿನಲ್ಲೂ ಕಾಡಿದ ಪಾತ್ರ 'ಮಹಾಶ್ವೇತೆ' ಕಾದಂಬರಿಯ ಅನುಪಮಾ. ಸುಧಾಮೂರ್ತಿ ಅವರ ಕಾದಂಬರಿಯ ಈ ಪಾತ್ರ ಸಮಾಜದಲ್ಲಿರುವ ತಪ್ಪು ಕಲ್ಪನೆಯನ್ನು ತಿದ್ದುವ ಮಾದರಿಯಲ್ಲಿ ಪ್ರಸ್ತುತಗೊಂಡಿದೆ.

ಬುದ್ಧಿವಂತಿಕೆ, ಸ್ವಾಭಿಮಾನ, ಕಲಾಭಿರುಚಿ ಮೇಳೈಸಿದ ಅಪೂರ್ವ ಸುಂದರಿ ಅನುಪಮಾ. ಬಡತನ, ಮಲತಾಯಿಯ ಅನಾದರ, ಜನರ ಚುಚ್ಚುಮಾತಿನ ಮಧ್ಯೆಯೂ ಎಂ.ಎ. ಓದುತ್ತಾ, ಸಂಸ್ಕೃತ ನಾಟಕದಲ್ಲಿ ಪಾತ್ರವಹಿಸುತ್ತಾ ಅವಳು ಓದುತ್ತಿದ್ದ ಕಾಲೇಜಿನ ಮೆಚ್ಚಿನ ವಿದ್ಯಾರ್ಥಿನಿಯಾಗಿ ಗುರುತಿಸಿಕೊಂಡವಳು. ಸಿನಿಮೀಯವಾಗಿ ಉತ್ತಮ ಕುಲದ ಶ್ರೀಮಂತ ರೂಪವಂತ ಡಾಕ್ಟರ್ ಜೊತೆ ಮದುವೆಯಾಗುತ್ತದೆ. ಸೌಂದರ್ಯಾರಾಧಕನಾದ ಗಂಡನ ಹೆಮ್ಮೆಯ ಮಡದಿಯಾಗಿ ಕೆಲ ತಿಂಗಳು ಕಳೆಯುವಷ್ಟರಲ್ಲಿ ತೊನ್ನು ಕಾಣಿಸಿ, ಅತ್ತೆ ಮನೆಯಿಂದ ತೌರಿಗೆ ದೂಡಲ್ಪಡುತ್ತಾಳೆ. ಬದುಕಿನ ದಾರಿ ಕಂಡುಕೊಳ್ಳುವ ಅನಿವಾರ್ಯತೆಗೆ ಸಿಲುಕುವ ಹೆಣ್ಣೊಬ್ಬಳ ಪಯಣವಿದು. ಇಲ್ಲಿ ವ್ಯಥೆಗಿಂತ ದಿಟ್ಟತನ, ಜೀವನಪ್ರೀತಿಯ ಹರಿವಿದೆ. ಹಾಗಾಗಿಯೇ ಸರಾಗ ಓದಿಸಿಕೊಳ್ಳುತ್ತಲೇ ಚಿಂತನೆಗೆ ಹಚ್ಚುತ್ತದೆ. ಪ್ರಶ್ನೆಗಳನ್ನು ನಮ್ಮೊಳಗೆ ಹುಟ್ಟಿಸುತ್ತದೆ.

ಈ ಜಗತ್ತಿಗೆ ಸೌಂದರ್ಯದ ಬಗ್ಗೆ ಸೆಳೆತವಿರುವಷ್ಟೇ ಮಾತ್ಸರ್ಯವೂ ಇರುತ್ತದೆ. ನಕ್ಷತ್ರದಂತಹ ಹುಡುಗಿ, ಶಾಪಗ್ರಸ್ತ ಅಪ್ಸರೆ ಎಂದು ಹೊಗಳುವ ಜನರ ನಡುವೆಯೇ 'ತನಗೆ ಬಿಳಿ ತೊಗಲದ ಅಂತ ಮೆರೀತಿದ್ಲು... ಈಗ ದೇವರೇ ಶಿಕ್ಷೆ ಕೊಟ್ಟ' ಅಂತ ಆಕೆಗೆ ಬಂದ ಕಾಯಿಲೆಯನ್ನು ಸಂಭ್ರಮಿಸುವ ಮಲತಾಯಿ ಇದ್ದಾಳೆ. ತಮ್ಮ ಮಗಳನ್ನು ನೋಡಲು ಗಂಡಿನ